# ಅಂತಾರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿವಾರಣೆ ದಿನ



ಸಂ.ಕ. ಸಮಾಚಾರ, ಮಂಗಳೂರು

ಶಿಕ್ಷಣ ಸಚಿವಾಲಯದ ನಿರ್ದೇಶನದ ಪ್ರಕಾರ 'ಲಿಂಗ ಸಂವೇದನೆ ಕುರಿತು ತರಬೇತಿ ಕಾರ್ಯಕ್ರಮ' ಎಂಬ ಶೀರ್ಷಿಕೆಯಡಿಯಲ್ಲಿ ಮಹಿಳೆಯರ ವಿರುದ್ಧ ತಾರತಮ್ಯ ಪಖ್ವಾಡಾ ಆಯೋಜಿಸುವ ಮೂಲಕ ಎನ್‌ಐಟಿಕೆ ಅಂತಾರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿವಾರಣೆ ದಿನವನ್ನು ಆಚರಿಸಿತು.

ಕಾರ್ಯಕ್ರಮವನ್ನು ಪ್ರೊ. ಜಿ.ಸಿ.ಮೋಹನ್ ಕುಮಾರ್ ಪ್ರಭಾರಿ ನಿರ್ದೇಶಕ ಎನ್‌ಐಟಿಕೆ ಸುರತ್ಕಲ್ ಉದ್ಘಾಟಿಸಿದರು. ರಿಜಿಸ್ಟ್ರಾರ್, ಡೀನ್‌ಗಳು, ವಿಭಾಗಗಳ ಮುಖ್ಯಸ್ಥರು ಮತ್ತು ಅಧ್ಯಾಪಕರು ಉಪಸ್ಥಿತರಿದ್ದರು.

ಚೆನ್ನೈನ ಐಸಿಸಿ-ಎಸ್‌ಹೆಚ್ ವಿಐಟಿನ ಅಧ್ಯಕ್ಷೆ ಪ್ರೊ. ವಿಜಯಕ್ಷ್ಮಿ ವಿ, ಭಾಗವಹಿಸಿ, ಲಿಂಗ ಸಂವೇದನೆಯ ಕುರಿತು ಮಾತನಾಡಿದರು.

ಶುಕ್ರವಾರದಿಂದ ಪ್ರಾರಂಭವಾಗುವ ಈ ಕಾರ್ಯಕ್ರಮವು ಡಿ.10ರವರೆಗೆ ಮುಂದುವರಿಯುತ್ತದೆ ಮತ್ತು ಬೋಧನೆ, ಬೋಧಕೇತರ ಮತ್ತು ಪ್ರಖ್ಯಾತ ಪಿಈಎಸ್‌ಹೆಚ್ ತರಬೇತುದಾರರಿಂದ ನಿರ್ದಿಷ್ಟವಾಗಿ ಲಿಂಗ ಸಮಸ್ಯೆಗಳ ಕುರಿತು ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಸೇರಿದಂತೆ ಕ್ಯಾಂಪಸ್‌ನಲ್ಲಿರುವ ಪ್ರತಿಯೊಬ್ಬರ ಅರಿವನ್ನು ಸೆಳೆಯುವ ಗುರಿ ಹೊಂದಿದೆ. ಎನ್‌ಐಟಿಕೆಯ ಆಂತರಿಕ ದೂರು ಸಮಿತಿಯ ಅಧ್ಯಕ್ಷೆ ಡಾ. ಶೀನಾ ಕಾರ್ಯಕ್ರಮ ಆಯೋಜಿಸಿದ್ದು, ಪ್ರೊ. ಅನ್ನಪ .ಬಿ, ಡಾ. ಸೆಂಥಿಲ್ ತಿಲಕ್, ಡಾ. ಖ್ಯಾತಿವರ್ಮಾ, ಮುರುಗವೇಲು.ಡಿ, ವಿಲ್ಮಾ ಐರಿನ್ ಪಿಂಟೋ ಸಂಯೋಜಕರಾಗಿದ್ದಾರೆ.

Samyukatha Karnataka, Date: 26/11/22, p, 01